ಹೌದು. ಆದರೆ, ನನಗೆ ಕಾದಂಬರಿ ಪ್ರಕಾರ ಇಷ್ಟವಿಲ್ಲ. ಸದ್ಯಕ್ಕೆ ಆತ್ಮಚರಿತ್ರೆಯ ಪ್ರಕಾರದಲ್ಲಿ ಏನಾದರೂ ಮಾಡಬೇಕೆಂದು ಪ್ರಯತ್ನಿಸುತ್ತಿದ್ದೇನೆ. ಅದು ಈಗ ನನ್ನನ್ನು ಸೆಳೆದಿದೆ. ಉತ್ತಮಪುರುಷ ಏಕವಚನಕ್ಕೆ ಬದಲಾಗಿ ಉತ್ತಮಪುರುಷ ಬಹುವಚನವನ್ನು ಬಳಸಲು ಪ್ರಯತ್ನಿಸುತ್ತಿದ್ದೇನೆ. ಆಗ ಓದಿದ ಯಾರಿಗೇ ಆದರೂ ಅದು ತಮ್ಮ ಕೃತಿ ಅನ್ನಿಸುತ್ತದೆ. ಇದು ಬಹಳ ಮಹತ್ವಾಕಾಂಕ್ಷೆಯ ಕನಸು. ನನಗೆ ಈ ಪ್ರಕಾರ ಇಷ್ಟ.

◆ **ನಿಮ್ಮ ಜೀವನದಲ್ಲಿ ನಡೆದಿರುವ ಅಸಾಧಾರಣ ಘಟನೆಗಳೊಂದಿಗೆ ನಮ್ಮಲ್ಲಿ ಹಲವರು ಗುರುತಿಸಿಕೊಳ್ಳಲು ಕಷ್ಟವಲ್ಲವೆ?**

ಓ ದೇವರೇ! ನನ್ನದು ಬಹಳ ಸಿಂಪಲ್ ಲೈಫ್! ನೀವು ಹೇಳಬಹುದು, ಹದಿಮೂರನೆ ವಯಸ್ಸಲ್ಲಿ ಹೀಗಾಯ್ತು, ಹದಿನಾಲ್ಕರಲ್ಲಿ ಹೀಗಾಯ್ತು... ಅಂತ. ಅವೆಲ್ಲ ಸತ್ಯಸಂಗತಿಗಳು, ಅಷ್ಟೇ. ಸತ್ಯಸಂಗತಿಗಳು ಸತ್ಯವನ್ನು ಅಸ್ಪಷ್ಟವಾಗಿ ಬಿಂಬಿಸುತ್ತವೆ. ಪ್ರತಿ ಮನುಷ್ಯನೂ ಭೂಮಿಯಲ್ಲಿ ಬೆಳೆಯಲು ಬೆಲೆ ತೆರಲೇಬೇಕಾಗುತ್ತದೆ. ಬಹಳಷ್ಟು ಮಂದಿ ಬೆಳೆಯುವುದೇ ಇಲ್ಲ. ಅದು ಬಹಳ ಕಷ್ಟ. ಬಹಳಷ್ಟು ಮಂದಿ ಮುದಿಯಾಗಿಬಿಡುತ್ತಾರೆ, ಅಷ್ಟೇ. ಇದು ಸತ್ಯ. ಅವರು ತಮ್ಮ ಕ್ರೆಡಿಟ್ ಕಾರ್ಡುಗಳಲ್ಲಿ ಮುಳುಗಿರುತ್ತಾರೆ. ಮದುವೆಯಾಗುತ್ತಾರೆ. ಮಕ್ಕಳನ್ನು ಮಾಡಿಕೊಳ್ಳುತ್ತಾರೆ. ಆದರೆ, ಬೆಳೆಯುವುದಿಲ್ಲ. ಅವರಿಗೆ ವಯಸ್ಸಾಗುತ್ತದೆ. ಬೆಳೆಯುವುದಕ್ಕೆ ಭೂಮಿಗೆ ಬೆಲೆ ತೆರಬೇಕಾಗುತ್ತದೆ. ನಿಮ್ಮ ಸಮಯ, ನಿಮ್ಮ ಸ್ಥಳ, ಪ್ರತಿಯೊಂದರ ಜವಾಬ್ದಾರಿ ಹೊರಬೇಕಾಗುತ್ತದೆ. ಇದು ಬಹಳ ಗಂಭೀರವಾದ ವಿಷಯ. ನೀವು ಪ್ರೀತಿಸಬೇಕಾಗುತ್ತದೆ, ಪ್ರೀತಿ ಕಳೆದುಕೊಳ್ಳಬೇಕಾಗಬಹುದು, ಸೋಲನ್ನು ಧೈರ್ಯವಾಗಿ ಎದುರಿಸಬೇಕು. ಸತ್ಯವನ್ನು ಯಾರು ಬೇಕಾದರೂ ಕಂಡುಕೊಳ್ಳಬಹುದು. ಅದಕ್ಕೆ ಬೆಲೆ ತೆರಬೇಕು. ಇದನ್ನೇ ನಾನು ಬರೆಯುವುದು. ಬಹಳ ಸರಳವಾದ ಕತೆಯನ್ನು ಹೇಳುತ್ತಿದ್ದೇನೆ.

◆ **ನಿಮಗೆ ಸುಳ್ಳು ಹೇಳಬೇಕೆನ್ನಿಸುವುದಿಲ್ಲವೇ? ಕಾದಂಬರಿಕಾರರು ಸುಳ್ಳು ಹೇಳುತ್ತಾರೆ, ಅಲ್ಲವೇ?**

ಕಾದಂಬರಿಕಾರರು ಸುಳ್ಳು ಹೇಳುವುದರ ಬಗ್ಗೆ ಗೊತ್ತಿಲ್ಲ. ದೊಡ್ಡ ಕಾದಂಬರಿಕಾರರನ್ನು ನೋಡಿದಾಗ ಅವರು ಸತ್ಯವನ್ನು ಹೇಳಿದ್ದರಿಂದಲೇ ಅಷ್ಟು ದೊಡ್ಡವರಾಗಿದ್ದಾರೆ ಅನ್ನಿಸುತ್ತದೆ. ಅವರು ಕಲ್ಪನೆಯ ಹೆಸರುಗಳು, ಜನ, ಸ್ಥಳ, ಸಮಯದ ಕುರಿತು ಹೇಳುತ್ತಿದ್ದರೂ ಮನುಷ್ಯರ ಬಗೆಗಿನ ಸತ್ಯವನ್ನೇ ಹೇಳುತ್ತಿದ್ದಾರೆ. ನಮ್ಮ ಸಾಮರ್ಥ್ಯವೇನು, ನಾವು ಯಾಕೆ ಕಳೆದುಕೊಳ್ಳುತ್ತೇವೆ, ನಗುತ್ತೇವೆ, ಅಳುತ್ತೇವೆ, ಬೀಳುತ್ತೇವೆ, ಅವಡುಗಚ್ಚುತ್ತೇವೆ, ಮುಷ್ಟಿ ಬಿಗಿಹಿಡಿದು ಒಬ್ಬರನ್ನೊಬ್ಬರು ಕೊಲ್ಲಲು ಇಲ್ಲವೇ ಪ್ರೀತಿಸಲು ಮುಂದಾಗುತ್ತೇವೆ ಎನ್ನುವುದನ್ನು ಹೇಳುತ್ತಾರೆ.

◆ **ಜೇಮ್ಸ್ ಬಾಲ್ಡ್‌ವಿನ್ ಸೇರಿದಂತೆ ಈ ಸಂದರ್ಶನ ಸರಣಿಯಲ್ಲಿ ಮಾತಾಡಿದ ಹಲವರು 'ಬರೆಯುವಾಗ ನಿಮಗೆ ಗೊತ್ತಿರದ ಏನನ್ನೋ ಅರಿಯಲು ಯತ್ನಿಸುತ್ತಿರುತ್ತೀರಿ' ಅಂತ ಹೇಳಿದರು. ನೀವು ಕೂಡ ಬರೆಯುವಾಗ ಹೀಗೆ ನಿಮ್ಮ ಬಗ್ಗೆ ಇಲ್ಲವೆ ನಮ್ಮ ಬಗ್ಗೆ ತಿಳಿದಿರದ ಸಂಗತಿಗಳನ್ನು ಹುಡುಕುವಿರಾ?**

ಹೌದು, ಬರೆಯುವಾಗ ನಾನು ಯಾರು, ನಾವು ಯಾರು, ನಮ್ಮ ಸಾಮರ್ಥ್ಯವೇನು, ನಮಗೆ ಏನನ್ನಿಸುತ್ತದೆ, ನಾವು ಯಾಕೆ ಸೋಲುತ್ತೇವೆ, ಹೇಗೆ ಎದುರಿಸಿ ನಿಲ್ಲುತ್ತೇವೆ, ಕತ್ತಲಿನಿಂದ ಇನ್ನಷ್ಟು ಕತ್ತಲಿನತ್ತ ಹೇಗೆ ನಡೆಯುತ್ತೇವೆ ಎನ್ನುವುದನ್ನು ತಿಳಿಯಲು ಯತ್ನಿಸುತ್ತೇನೆ. ಇದರ ಜೊತೆಗೆ